2) ಬೆಂಗಳೂರು ನಗರದ ಪೊಲೀಸ್ ಅಧಿಕಾರಿಗಳು : ಸಿಬ್ಬಂದಿಯವರು ಇಂತಹ ಅಪರಾಧಗಳು ನಡೆಯದಂತೆ ತಡೆಗಟ್ಟಲು ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುತ್ತಾರೆ.

1) ಅಧಿಕಾರಿ ಮತ್ತು ಸಿಬ್ಬಂದಿಯವರು ತಮ್ಮ ವ್ಯಾಪ್ತಿಯಲ್ಲಿ ಹಗಲು ರಾತ್ರಿ ಗಸ್ತಿನ ವ್ಯವಸ್ಥೆಯನ್ನು ಚುರುಕುಗೊಳಿಸಲಾಗಿದೆ.

2) ಬೆಂಗಳೂರು ನಗರದ ನಾಗರೀಕರನ್ನು ನೆರೆ ಹೊರೆಯ ಕಾವಲು ಸಮಿತಿಯ ಸದಸ್ಯರುಗಳನ್ನಾಗಿ ನೇಮಿಸಿಕೊಳ್ಳಲು ಯೋಜನೆ ಕೈಗೊಳ್ಳಲಾಗಿದೆ.

3) ಬೆಂಗಳೂರು ನಗರದಲ್ಲಿ ವರದಿಯಾದ ಅಪರಾಧಗಳನ್ನು ಪತ್ತೆ ಹಚ್ಚಲು ವಿಶೇಷ ತನಿಖಾ ಘಟಕಗಳನ್ನು ರಚಿಸಲಾಗಿದೆ.

4) ಅಪರಾಧಗಳನ್ನು ತಡೆಗಟ್ಟಲು ಹಾಗೂ ಪೊಲೀಸ್ ಸಿಬ್ಬಂದಿ : ಅಧಿಕಾರಿಗಳೊಡನೆ ಸಹಕರಿಸಲು ಮುಂಜಾಗ್ರತಾ ಕ್ರಮವಾಗಿ ಎಸ್.ಪಿ.ಓ. (ವಿಶೇಷ ಪೊಲೀಸ್ ಅಧಿಕಾರಿ)ಗಳನ್ನು ನೇಮಿಸಲಾಗಿದೆ.

5) ಹಗಲು-ರಾತ್ರಿ ಹೊಯ್ಸಳ ಗಸ್ತಿನ ವ್ಯವಸ್ಥೆ ಮಾಡಿ ಅಪರಾಧ ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ.

ಕೆ.ಎಸ್.ಎಫ್.ಸಿ ಸಂಸ್ಥೆಯು ಮನ್ನಾ ಮಾಡಿರುವ ಅಸಲು ಮತ್ತು ಬಡ್ಡಿ

2446(2800) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) :— ಮಾನ್ಯ ರಾಜ್ಯ ಹಣಕಾಸು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಕಳೆದ 3 ವರ್ಷಗಳಲ್ಲಿ ಮಂಜೂರು ಮಾಡಿರುವ ಸಾಲದ ಮೊತ್ತ ಹಾಗೂ ವಸೂಲಿ ಮಾಡಿರುವ ಬಡ್ಡಿ ಮತ್ತು ಅಸಲಿನ ವಿವರಗಳನ್ನು ಒದಗಿಸುವುದು.

ಆ) ಸದರಿ ಸಂಸ್ಥೆಯು ರೋಗಗ್ರಸ್ತ ಉದ್ಯಮಗಳು ಹಾಗೂ ನಷ್ಟದಲ್ಲಿರುವ ಉದ್ಯಮಗಳ ಹೆಸರಿನಲ್ಲಿ ಅಸಲು ಹಾಗೂ ಬಡ್ಡಿಯನ್ನು ಮನ್ನಾ ಮಾಡಿರುವ ಪ್ರಸಂಗಗಳೇನಾದರೂ ಇದೆಯೇ; ಹಾಗಿದ್ದಲ್ಲಿ ಈ ರೀತಿಯ ಅಸಲು ಹಾಗೂ ಬಡ್ಡಿಯನ್ನು ಮನ್ನಾ ಮಾಡಲು ಇರುವ ಅಳತೆಗೋಲುಗಳೇನು (ವಿವರಗಳನ್ನು ಒದಗಿಸುವುದು)

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :—

ಅ) ಕಳೆದ 3 ವರ್ಷಗಳಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು 9038 ಪ್ರಕರಣಗಳಲ್ಲಿ ಸುಮಾರು 1152 ಕೋಟಿ ರೂ.ಗಳನ್ನು ವಿವಿಧ ಚಟುವಟಿಕೆಗಳಿಗೆ ಸಾಲ

ಮಂಜೂರು ಮಾಡಿರುತ್ತದೆ. ಸಂಸ್ಥೆಯು ಕಳೆದ 3 ವರ್ಷಗಳಲ್ಲಿ ಒಟ್ಟಾರೆ 1843 ಕೋಟಿ ರೂ.ಗಳನ್ನು ವಸೂಲು ಮಾಡಿರುತ್ತದೆ. ಇದರಲ್ಲಿ ಅಸಲು 1093 ಕೋಟಿ ರೂ. ಮತ್ತು ಬಡ್ಡಿ 750 ಕೋಟಿ ರೂ.ಗಳು ಸೇರಿರುತ್ತದೆ.

ಸಂಸ್ಥೆಯು ಕಳೆದ 3 ವರ್ಷಗಳಲ್ಲಿ ವಿವಿಧ ಚಟುವಟಿಕೆಗಳಡಿಯಲ್ಲಿ ಮಂಜೂರು ಮಾಡಲಾದ ಸಾಲ ವಸೂಲಿಗಳ ವರ್ಷವಾರು ವಿವರಗಳು ಈ ಕೆಳಕಂಡಂತಿದೆ.

ವರ್ಷ	ಮಂಜೂರಾತಿ		ವಸೂಲಾತಿ		
	ಸಂಖ್ಯೆ	ಮೊತ್ತ	ಅಸಲು	ಬಡ್ಡಿ	ಒಟ್ಟು
98-99	3753	371.96	400.18	271.63	671.81
99-00	2878	340.26	385.71	256.69	642.30
00-01	2677	440.05	308.04	221.32	529.36
ಒಟ್ಟು	9308	1152.27	1093.93	749.64	1843.47

ಅ) ಹೌದು.

ಸಂಸ್ಥೆಯು ಸಾಲ ವಸೂಲಾತಿಗೆ ಬೇರೆ ಮಾರ್ಗಗಳು ಬರಿದಾದಾಗ ಈ ಕೆಳಗಿನ ಸಂದರ್ಭಗಳಲ್ಲಿ ಒಂದೇ ಬಾರಿ ಸಾಲ ಇತ್ಯರ್ಥ (OTS) ವಿಧಾನವನ್ನು ಅನುಸರಿಸುತ್ತಿದೆ.

ಅ) ಯಾವ ಘಟಕಗಳು ಅಸ್ತಿತ್ವದಲ್ಲಿರದೇ ಅವುಗಳ ಸ್ವತ್ತುಗಳು ಮಾರಾಟ ಅಸಾಧ್ಯವಾಗಿರುವಾಗ

ಆ) ಕೆಲವು ಕ್ಷೇತ್ರಗಳಲ್ಲಿನ ಉದ್ದಿಮೆಗಳು ವಿಫಲವಾಗಿದ್ದು ಮತ್ತು ಪುನಶ್ಚೇತನಗೊಳಿಸಲು ಅಥವಾ ಸಾಲ ವಸೂಲಾತಿ ಸಾಧ್ಯವಿಲ್ಲದಿರುವಾಗ.

ಇ) ಕಾನೂನು ತೊಡಕು/ವಿವಾದಗಳು ಇರುವ ಉದ್ದಿಮೆಗಳಿಂದ ಸಹಜ ರೀತಿಯಲ್ಲಿ ಸಾಲ ವಸೂಲಾತಿ ಸಾಧ್ಯವಿಲ್ಲದೇ ಇದ್ದಾಗ.

ಈ) ಸಂಸ್ಥೆಗೆ ಬಾಕಿ ಇರುವ ಒಟ್ಟು ಮೊತ್ತಕ್ಕೆ ಈಗಿರುವ ಘಟಕದ ಎಲ್ಲಾ ಭದ್ರತೆಗಳು ಪೂರಕವಾಗಿಲ್ಲದಿದ್ದಾಗ.

ಬೆಂಗಳೂರು ನಗರ ಮೆಜೆಸ್ಟಿಕ್ ಸುತ್ತಮುತ್ತಲಿರುವ ಮುಜರಾಯಿ ಆಸ್ತಿಯ ರಕ್ಷಣೆ

2448(2802) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.